ಪ್ರಮಾಣಪತ್ರಕ್ಕೆ ಲಗತ್ತು

ದಿನಾಂಕ**: 04.11.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಆರ್ ಎಂ ಜಿ ವಕೀಲರಿಂದಃ-

ವಾದಿಯ ಮಗನಾದ ಮೂರ್ತಿ ರವರಿಗೂ ನನ್ನ ತಂದೆಯವರಿಗೂ ಪರಿಚಯ ಇರುತ್ತದೆಂದರೆ ಸರಿ. ನನ್ನ ತಂದೆ **1999** ರಲ್ಲಿ ಗ್ರಾಮ ಪಂಚಾಯ್ತಿಯ ಉಪಾಧ್ಯಕ್ಷರಾಗಿದ್ದರು ಎಂದರೆ ಸರಿ. ದಿಃ **09.12.1999** ರಲ್ಲಿ ಒಂದು ಮೀಟಿಂಗ್ ಮಾಡಿ ಒಂದು ರೆಸಲ್ಯೂಷನ್ ಅನ್ನು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಸದರಿ ಮೀಟಿಂಗ್ ನಲ್ಲಿ ಪ್ರತಿವಾದಿಗೆ ನಾಲ್ಕು ಸ್ವತ್ತುಗಳನ್ನು ಒಟ್ಟು ಗೂಡಿಸಿ ಪೂ-ಪಃ **125** ಅಡಿ, ಉ-ದಃ **137** ಅಡಿ ಸ್ವತ್ತುಗಳುನ್ನು ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಊರಲ್ಲಿರುವ ರಸ್ತೆಗಳನ್ನು ಅಳತೆ ಮಾಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಊರಿನಲ್ಲಿ **12** ಅಡಿಗಳಿಗಿಂತ ಕಡಿಮೆ ಯಾವುದೇ ರಸ್ತೆಗಳು ಇರುವುದಿಲ್ಲ. ನಮ್ಮ ಉರಿನಲ್ಲಿ **8** ಅಡಿ ರಸ್ತೆಗಳು ಮಾತ್ರ ಇರುವುದು ಎಂದು ವರದಿ ನೀಡಲಾಗಿರುತ್ತದೆಂದರೆ ಸರಿಯಲ್ಲ. ನನ್ನ ತಂದೆಯೇ ಈ ದಾವೆಯನ್ನು ವಾದಿಯಿಂದ ಹೂಡಿಸಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗೆ ಸ್ವತ್ತುಗಳನ್ನು ನೀಡಿರುವುದು ನನ್ನ ತಂದೆಯೇ ಎಂದರೆ ನನಗೆ ಗೊತ್ತಿಲ್ಲ.

**2. 12** ಅಡಿ ರಸ್ತೆ ಇದೆ ಎಂದು ಹೇಳುವ ದಾಖಲೆಯನ್ನು ನಾನು ನೋಡಿರುವುದಿಲ್ಲ. ನಮ್ಮ ಊರಿನಲ್ಲಿರುವುದು **8** ಅಡಿ ರಸ್ತೆಗಳು ಮಾತ್ರ **12** ಅಡಿ ರಸ್ತೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವೆಯ ವಿಚಾರಗಳು ನನಗೆ ಏನು ತಿಳಿಯದೇ ಇದ್ದರೂ ಸಹ ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.